ಅನುಭವ ಕಥನ

# ಇಬ್ಬರು 'ಗೇ'-ಪತ್ನಿಯರು



ವಸುಧೇಂದ್ರ

ಕಲೆ: ಗುಜ್ಜಾರ್

ಒಂದೇ ಸಮಸ್ಯೆಯನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನಿರ್ವಹಿಸುವುದು ಈ ಜಗತ್ತಿನ ಯಾವತ್ತಿನ ಸೋಜಿಗ. ಯಾವುದು ಸರಿ ಅಥವಾ ಯಾವುದು ತಪ್ಪು ಎನ್ನುವ ಚರ್ಚೆ ಬಹುತೇಕ ಅರ್ಥಹೀನ. ಪ್ರತಿಯೊಬ್ಬರ ಬದುಕಿನ ಹಿನ್ನೆಲೆ, ವರ್ತಮಾನದ ಸ್ಥಿತಿ-ಗತಿ, ಭವಿಷ್ಯದ ಪರಿಕಲ್ಪನೆ – ಅವರ ನಡೆಯನ್ನು ರೂಪಿಸುತ್ತವೆ. ಅಷ್ಟಕ್ಕೂ ಅವರವರ ನಿರ್ಧಾರದ ಪ್ರತಿಫಲವನ್ನು ಅವರೇ ಅನುಭವಿಸಬೇಕಾದ ಕಡ್ಡಾಯವಿರುತ್ತದೆಯಾದ್ದರಿಂದ, ಮೂರನೆಯವರು ಕುತೂಹಲದಿಂದ ಇನ್ನೊಬ್ಬರ ನಡಿಗೆಯನ್ನು ಗಮನಿಸುವುದಷ್ಟೇ ಆರೋಗ್ಯಪೂರ್ಣ ಕ್ರಿಯೆಯಾಗಿರುತ್ತದೆ. ಲೋಕದ ಸರಿ-ತಪ್ಪುಗಳು ಸಾಪೇಕ್ಷವಾಗಿದ್ದು, ಅದರ ಚರ್ಚೆಯೆಂಬುದು ಕೇವಲ ಕಾಲಹರಣವಾಗಿರುತ್ತದೆ. ಆದರೆ ಪ್ರತಿಯೊಬ್ಬರಿಗೂ ತಮ್ಮ ತಮ್ಮ ನಂಬಿಕೆಗಳು, ನಿಲುವುಗಳೇ ಅರ್ಥಪೂರ್ಣವೆಂಬ ಅಹಂಕಾರವಿರುತ್ತದೆಯಾದ್ದರಿಂದ, ಈ ಸರಿ-ತಪ್ಪುಗಳ ವ್ಯಾಖ್ಯಾನ ಜಗತ್ತಿನಲ್ಲಿ ನಿರಂತರವಾಗಿರುತ್ತದೆ.

ನಾನೊಬ್ಬ ಆಪ್ತಸಮಾಲೋಚಕನಾದ್ದರಿಂದ ಸಮಸ್ಯೆಯಲ್ಲಿ ಸಿಕ್ಕುಬಿದ್ದ ಹಲವಾರು 'ಗೇ' ಜನರನ್ನು ಭೇಟಿಯಾಗುತ್ತಲೇ ಇರುತ್ತೇನೆ. ಎಷ್ಟೋ ಸಮಸ್ಯೆಗಳು ಮರುಕಳಿಕೆ ಆಗುತ್ತಲೇ ಇರುತ್ತವೆ. ಆದರೆ ಅದನ್ನು ಒಬ್ಬೊಬ್ಬರು ನಿರ್ವಹಿಸುವ ಕ್ರಮ ಬಹಳ ಬೇರೆಯಾಗಿರುತ್ತದೆ. ಆಪ್ತಸಮಾಲೋಚಕನಾಗಿ ನನ್ನ ಜವಾಬ್ದಾರಿ ಬಹುತೇಕ ಪರಾನುಭೂತಿಯಿಂದ ಅವರ ಸಮಸ್ಯೆಗಳನ್ನು ಆಲಿಸಿಕೊಳ್ಳುವುದೇ ಆಗಿರುತ್ತದೆ. ಹಲವು ಸಾಧ್ಯತೆಗಳ ದಾರಿಗಳ ಕಡೆಗೆ ಬೆಳಕು ಚೆಲ್ಲಬಹುದೇ ಹೊರತು, ಇದೇ ಸರಿಯಾದ ನಡೆಯೆಂದು ಯಾರಿಗೂ ಹೇಳುವುದು ವೃತ್ತಿಧರ್ಮವಾಗುವುದಿಲ್ಲ. ಇತ್ತೀಚೆಗೆ ಇಬ್ಬರು ಗೇ-ಪತ್ನಿಯರ ನೋವನ್ನು ಆಪ್ತಸಮಾಲೋಚಕನಾಗಿ ಆಲಿಸುವ ಅವಕಾಶ ನನಗೆ ಒದಗಿ ಬಂತು. ಅವರಿಬ್ಬರ ಸಮಸ್ಯೆ ಬಹುತೇಕ ಒಂದೇ ಆಗಿತ್ತು. ಆದರೆ ಅವರು ಆಯ್ದುಕೊಂಡ ದಾರಿ ಮಾತ್ರ ಪರಸ್ಪರ ವಿರುದ್ಧವಾಗಿತ್ತು. ಆ ಎರಡೂ ಪ್ರಸಂಗಗಳನ್ನು ನಿಮ್ಮೆದುರಿಗೆ ಇಡುತ್ತೇನೆ.

ಮೊದಲನೆಯ ದಂಪತಿ ಕೇರಳದವರು. ಅವರಿಗೊಬ್ಬ ಹದಿನಾಲ್ಕು ವಯಸ್ಸಿನ ಮಗಳಿದ್ದಳು. ಇಬ್ಬರ ವಯಸ್ಸೂ ನಲವತ್ತೈದು ದಾಟಿತ್ತು. ವಿಶೇಷವೆಂದರೆ ಅವರದು ಪ್ರೇಮ ವಿವಾಹ. ಈಗ ಪತ್ನಿ ಬಿಡುಗಡೆಗೆ ಒತ್ತಾಯಿಸುತ್ತಿದ್ದಾಳಾದ್ದರಿಂದ, ಇಬ್ಬರೂ ನನ್ನ ಬಳಿ ಆಪ್ತಸಮಾಲೋಚನೆಗೆ ಬಂದಿದ್ದರು. ಇಬ್ಬರನ್ನೂ ಮೊದಲಿಗೆ ಪ್ರತ್ಯೇಕವಾಗಿ